**ಸಾಕ್ಷಿಯನ್ನು ದಿಃ 26.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ಈ ಕೇಸಿನ 1 ಮತ್ತು 2 ನೇ ಅರ್ಜಿದಾರರು ನನ್ನ ಮಗಳ ಅತ್ತೆ ಮಾವ ಎಂದರೆ ಸರಿ. ಅಪಘಾತ ನನ್ನ ಮಗಳ ಮದುವೆಯಾದ ನಂತರ ಆಗಿದೆ ಎಂದರೆ ಸರಿ. ನನಗೆ ಎರಡು ಹೆಣ್ಣು ಮತ್ತು ಒಬ್ಬ ಗಂಡು ಮಗ. ಮಗನಿಗೆ ಮದುವೆಯಾಗಿಲ್ಲ. ಮತ್ತೊಬ್ಬ ಮಗಳಿಗೂ ಮದುವೆಯಾಗಿದೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಹೆಂಡತಿ ಗೃಹಿಣಿ. ಮದುವೆ ಸಮಯದಲ್ಲಿ ನಾವು ಅಳಿಯನಿಗೆ ನೀಡಿದ ಉಂಗುರವನ್ನು ಅಪಘಾತದಲ್ಲಿ ತೀರಿದ ನಂತರ ಅವರು ಹಿಂದಿರುಗಿಸಿದ್ದಾರೆ ಎಂದರೆ ಸರಿ. ಶವ ಸಂಸ್ಕಾರ ಹಾಗೂ ತಿಥಿ ಕಾರ್ಯಗಳನ್ನು ಅರ್ಜಿದಾರರುಗಳೇ ಮಾಡಿದ್ದಾರೆ ಎಂದರೆ ಸರಿ. ಮದುವೆಯಾದ ನಂತರ ಮೃತಳ ಪರಿಹಾರ ಆಕೆಯ ಅತ್ತೆ ಮಾವನಿಗೆ ಬರಬೇಕೇ ಹೊರತು ಅಪ್ಪ ಅಮ್ಮನಿಗೆ ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಗಂಡನ ಮನೆಯಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದಳು ಎಂದರೆ ಸರಿ. ನಾನು ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ನಾವು ನನ್ನ ಮಗನ ಮೇಲೆ ಅವಲಂಬಿತನಾಗಿದ್ದು ಮಗಳ ಮೇಲೆ ಅವಲಂಬಿತನಾಗಿರಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.